**1 ನೇ ಹೆಚ್ಚುವರಿ ಸತ್ರ ಮತ್ತು ವಿಶೇಷ ನ್ಯಾಯಾಲಯದ ನ್ಯಾಯಾಧೀಶರು,**
**ಚಿಕ್ಕಮಗಳೂರು**

**ಸ್ಪೆಷಲ್ ಮೊಕದ್ದಮೆ ಸಂಖ್ಯೆಃ 83/2020**

| | | |
|---|---|---|
| ಆರೋಪಿಯ ಹೆಸರು | : | ಸುರೇಶ್ |
| ತಂದೆಯ ಹೆಸರು | : | ಲೇಟ್ ಕೆಂಚಪ್ಪ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಚಾಲಕ |
| ವಾಸಸ್ಥಳ | : | ಕೆಂಚಿಕೊಪ್ಪ ಗ್ರಾಮ, ಲಕ್ಕವಳ್ಳಿ ಹೋಬಳಿ<br>ತರೀಕೆರೆ ತಾಲ್ಲೂಕು |

**ಕಲಂ 313 ಸಿ.ಆರ್ ಪಿ.ಸಿ. ಅಡಿಯಲ್ಲಿ ಆರೋಪಿತನ ಹೇಳಿಕೆ.**

ಪ್ರಶ್ನೆ-1 ಅಭಿಯೋಜನೆಯ ಸಾಕ್ಷಿಗಳ ಸಾಕ್ಷ್ಯವಿಚಾರವನ್ನು ಕೇಳಿದ್ದೀರಾ?

ಉತ್ತರಃ ಕೇಳಿದ್ದೇನೆ.

ಪ್ರಶ್ನೆ-2 ಫ್ರಾ.ಸಾ.1 ಮಂಜುನಾಥ ಇವರು ತಮ್ಮ ಸಾಕ್ಷ್ಯದಲ್ಲಿ ಅವರ ಮನೆಯ ಪಕ್ಕದಲ್ಲಿ ಆರೋಪಿಯಾದ ನಿನ್ನ ಅಣ್ಣ ತಿಮ್ಮರಾಜುವಿನ ನಿವೇಶನ ಇದ್ದುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-3 ಫ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿಃ 05.05.2020 ರಂದು ರಾತ್ರಿ 8.30 ರ ಸಮಯದಲ್ಲಿ ಅವರು ಮನೆಯಲ್ಲಿ ಊಟ ಮಾಡುವಾಗ ಆರೋಪಿಯಾದ ನೀನು ಆತನಿಗೂ ಮತ್ತು ಆತನ ತಾಯಿಗೆ ಬೈಯುತ್ತಿದ್ದುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-4 ಫ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಿವೇಶನದ ವಿಚಾರವಾಗಿ ಆರೋಪಿಯಾದ ನೀನು ಬೈಯುತ್ತಿದ್ದು ಆ ಬಗ್ಗೆ ಆತನು ಕೇಳಿದಾಗ ನೀನು ಅಡಿಕೆ ದಬ್ಬೆಯಿಂದ ಆತನ ಎರಡು ಕಾಲುಗಳ ಮೊಣಕಾಲಿಗೆ ಹೊಡೆದು ರಕ್ತಗಾಯ ಪಡಿಸಿದಾಗಿ, ನೀನು ಆತನ್ನನು ದೂಡಿದಾಗ ಕಾಂಪೌಂಡ್ ಗೋಡೆಗೆ ತಗುಲಿ ಆತನ ತಲೆಗೆ ಸ್ವಲ್ಪ ಗಾಯವಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-5 ಫ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅಷ್ಟರಲ್ಲಿ ಚಾಸಾ.2 ಭಾಸ್ಕರ, ಚಾಸಾ.3 ಮಧುಕುಮಾರ್ ಮತ್ತು ಚಾಸಾ.5 ವಿಜಯಕುಮಾರ ರವರು ಬಂದು ಆತನನ್ನು ಲಕ್ಕವಳ್ಳಿ ಆಸ್ಪತ್ರೆಗೆ ದಾಖಲು ಮಾಡಿದ್ದಾಗಿ, ಆತನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮಾರನೆ ದಿನ ಪೊಲೀಸರ ಮುಂದೆ ನಿಪಿ.1 ರಂತೆ ದೂರು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-6 ಫ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದೂರು ದಾಖಲಾದ 2-3 ದಿನಕ್ಕೆ ಪೊಲೀಸರು ಸ್ಥಳಕ್ಕೆ ಬಂದು ನಿಪಿ.2 ರಂತೆ ಮಹಜರ ಮಾಡಿ ಅಲ್ಲೇ ಬಿದ್ದಿದ್ದ ನೀನು ಹಲ್ಲೆ ಮಾಡಲು ಉಪಯೋಗಿಸಿದ್ದ ಮು.ಮಾ-1 ಅಡಿಕೆ ದಬ್ಬೆಯನ್ನು ಅಮಾನತು ಪಡಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-7 ಫ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನೀನು ಆತನಿಗೆ ಚೆಲುವಾಡಿ ಸೂಳೆಮಗನೇ, ಬೋಳಿಮಗನೇ ನನಗೆ ಏನು ಮಾಡುತ್ತೀಯಾ ಎಂದು ಅಲ್ಲೇ ರಸ್ತೆಯ ಬದಿಯಲ್ಲಿ ಬಿದ್ದಿದ್ದ ಒಂದು ದೊಣ್ಣೆಯಿಂದ ಹೊಡೆದಿದ್ದಾಗಿ, ಕೈಯಿಂದ ಆತನ ಮುಖಕ್ಕೆ ಹೊಡೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-8 ಫ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆಗ ಆತನ ತಾಯಿ ಹೊರಗಡೆ ಬಂದು ಕೂಗಿಕೊಂಡಾಗ ಆರೋಪಿಯಾದ ನೀನು ಆತನಿಗೆ, ನಿನ್ನನ್ನು ಸುಮ್ಮನೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿ ದೊಣ್ಣೆಯನ್ನು ಬಿಸಾಕಿ ಹೋಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-9 ಫ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದೂರನ್ನು ಪಡೆದುಕೊಂಡ ನಂತರ ದಿಃ 07-05-2020 ರಂದು ಪೊಲೀಸರು ಘಟನೆ ನಡೆದಿದ್ದ ಜಾಗಕ್ಕೆ ಬಂದಿದ್ದಾಗಿ, ಅಲ್ಲಿ ಆತನು ಪೊಲೀಸರಿಗೆ ಆತನ ಮೇಲೆ ಹಲ್ಲೆ ನಡೆದ ಜಾಗವನ್ನು ತೋರಿಸಿಕೊಟ್ಟು ಮು.ಮಾ.1 ನ್ನು ಹಾಜರು ಪಡಿಸಿದ್ದಾಗಿ, ಪೊಲೀಸರು ಬೆಳಗ್ಗೆ 11 ರಿಂದ 11.45 ರವರೆಗೆ ನಿಪಿ.2 ರಂತೆ ಮಹಜರ ಕ್ರಮ ಜರುಗಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ

ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-10 ಫ್ರಾ.ಸಾ.3 ಮಧುಕುಮಾರ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 07.05.2020 ರಂದು ಬೆಳಿಗ್ಗೆ 11.00 ರಿಂದ 11.45 ರತನಕ ಆರೋಪಿಯಾದ ನೀನು ಚಾಸಾ-1 ಮಂಜುನಾಥ ರವರಿಗೆ ಹಲ್ಲೆ ಮಾಡಿದ ವಿಚಾರವಾಗಿ ನಿಪಿ.2 ರಂತೆ ಮಹಜರ್ ಮಾಡಿದ್ದಾಗಿ, ಗಲಾಟೆಯ ಜಾಗವನ್ನು ಚಾಸಾ.1 ರವರು ತೋರಿಸಿದ್ದಾಗಿ, ನಿಪಿ.3 ರ ಪೋಟೋವನ್ನು ಮಹಜರು ಕಾಲದಲ್ಲಿ ಆರೋಪಿಯಾದ ನಿನ್ನ ಮತ್ತು ಚಾಸಾ.1 ರವರ ಮನೆಯ ಬಳಿ ತೆಗೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-11 ಫ್ರಾ.ಸಾ.4 ತುಂಗಮ್ಮ ಇವರು ತಮ್ಮ ಸಾಕ್ಷ್ಯದಲ್ಲಿ ಮೂರು ವರ್ಷಗಳ ಹಿಂದೆ ರಾತ್ರಿ 8.30 ರ ಸಮಯದಲ್ಲಿ ಆರೋಪಿಯಾದ ನೀನು ಆಕೆಯ ಮಗ ಚಾಸಾ-1 ರವರು ಹೊರಗಡೆ ಇದ್ದಾಗ ಛಲವಾದಿ ಜಾತಿ ನಾಡ ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-12 ಫ್ರಾ.ಸಾ.4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಂತರ ಆ ರೀತಿ ಬೈದ್ಯು ಚಾಸಾ.1 ರವರ ಕಾಲಿಗೆ ಮತ್ತು ತಲೆಗೆ ದಬ್ಬೆಯಿಂದ ಹೊಡೆದಿದ್ದಾಗಿ, ಅಷ್ಟರಲ್ಲಿ ಆಕೆಯು ನನ್ನ ಮಗನಿಗೆ ಯಾಕೆ ಹೊಡೆಯುತ್ತೀರ ಎಂದು ಕೂಗಾಡಿದಾಗ ಚಾಸಾ.5 ವಿಜಯಕುಮಾರ, ಚಾಸಾ.6 ಚಂದನ್ ಚಾಸಾ.7 ಬಸವರಾಜ್ ರವರು ಬಂದು ಜಗಳ ಬಿಡಿಸಿದ್ದಾಗಿ, ಆಗ ಆರೋಪಿಯಾದ ನೀನು ಮು.ಮಾ.1 ನ್ನು ಅಲ್ಲೆ ಬಿಸಾಡಿ ನಿನ್ನನ್ನು ಸಾಯಿಸದೇ ಬಿಡುವುದಿಲ್ಲ ಎಂದು ಚಾಸಾ.1 ಮಂಜುನಾಥ ರವರಿಗೆ ಬೆದರಿಕೆ ಹಾಕಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-13 ಫ್ರಾ.ಸಾ.4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿಃ05.05.2020 ರಂದು ರಾತ್ರಿ 8.45 ಕ್ಕೆ ಆಕೆಯ ಮಗ ಊಟ ಮಾಡಿ ಹೊರಗೆ ನಿಂತುಕೊಂಡಿದ್ದಾಗಿ, ಆ ಸಮಯದಲ್ಲಿ ಆಕೆಯು ಮನೆಯೊಳಗೆ ಇದ್ದು ದಾಗಿ, ಆಗ ಆರೋಪಿಯಾದ ನೀನು ಬಂದು ಚಾಸಾ.1 ಮಂಜುನಾಥ ರವರಿಗೆ ಚಲುವಾದಿ ಸೂಳೇಮಗನೆ, ಬೋಳಿಮಗನೆ ಎಂದು ಬೈದು ಅಡಿಕೆ ದಬ್ಬೆಯಿಂದ ಎರಡು ಕಾಲುಗಳಿಗೆ ಹೊಡೆದು, ತಲೆಯನ್ನು ಹಿಡಿದುಕೊಂಡು ಹಣೆಯನ್ನು ಗೋಡೆಗೆ ಗುದ್ದಿಸಿ ಕೈಯಿಂದ ಮೈಕೈಗೆ ಹೊಡೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು

ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-14 ಫ್ರಾ.ಸಾ.8 ಡಾಃ ಮಾನಸ, ಮೆಡಿಕಲ್ ಆಫೀಸರ್ ಇವರು ತಮ್ಮ ಸಾಕ್ಷ್ಯದಲ್ಲಿ on 08.05.2020 at 8.00 p.m., one Manjunath S/o Late Ramaiah, aged about 28 years, resident of Kenchikoppa was brought to their hospital by his neighbor with the history of assault on 06/05/2020 at 7.30 p.m., on examination of said Manjunath, she noted small abrasions over both legs and face and accordingly she treated him for said abrasions ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-15 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು in her opinion said injuries were simple in nature, in the said regard, she issued wound Certificate as per Ex.P.10 on 13/05/2020, the injuries mentioned in Ex.P10 are possible if assaulted with a stick MO.1 ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-16 ಫ್ರಾ.ಸಾ.9 ಪ್ರಕಾಶ್, ಮುಖ್ಯ ಪೇದೆ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 06.05.2020 ರಂದು ಅವರು ಠಾಣಾಧಿಕಾರಿಯಾಗಿ ಕರ್ತವ್ಯದಲ್ಲಿ ಇದ್ದ ಸಮಯದಲ್ಲಿ ರಾತ್ರಿ 9.30 ಗಂಟೆ ಸಮಯದಲ್ಲಿ ಕೆಂಚಿಕೊಪ್ಪ ಗ್ರಾಮದ ವಾಸಿಯಾದ ಫ್ರಾಸಾ.1 ಮಂಜುನಾಥ ರವರು ಠಾಣೆಗೆ ಹಾಜರಾಗಿ ನೀಡಿದ ನಿಪಿ.1 ಗಣಕೀಕೃತ ದೂರನ್ನು ಪಡೆದು, ಠಾಣಾ ಮೊಕದ್ದಮೆ ಸಂಖ್ಯೆಃ 50/2020 ರಲ್ಲಿ ಪ್ರಕರಣ ದಾಖಲಿಸಿ, ನಿಪಿ.11 ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-17 ಫ್ರಾ.ಸಾ.10 ರೇಣುಕಪ್ರಸಾದ, ಡಿ.ವೈ.ಎಸ್.ಪಿ., ಇವರು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದ ತನಿಖೆಯನ್ನು ನಡೆಸಲು ಚಿಕ್ಕಮಗಳೂರು ಪೊಲೀಸ್ ವರಿಷ್ಠಾಧಿಕಾರಿಗಳು ದಿಃ 07-05-2020 ರಂದು ಅವರಿಗೆ ನಿ.ಪಿ.12 ರಂತೆ ಆದೇಶಿಸಿದ್ದು, ಅದೇ ದಿನ ಅವರು ಆ ಪ್ರಕರಣದ ಕಡತವನ್ನು ಫ್ರಾಸಾ.9 ಬಿ ಪ್ರಕಾಶ್ ರವರಿಂದ ಪಡೆದು ಪರಿಶೀಲಿಸಿದಾಗಿ, ಅದೇ ದಿನ ಕೆಂಚಿಕೊಪ್ಪ ಗ್ರಾಮದ ಸರಹದ್ದಿನಲ್ಲಿ ಕೃತ್ಯ ನಡೆದಿದ್ದ ಸ್ಥಳಕ್ಕೆ ಭೇಟಿ ನೀಡಿ, ಪಂಚರಾದ

ಫ್ರಾಸಾ-2 ಭಾಸ್ಕರ ಮತ್ತು ಫ್ರಾಸಾ-3 ಮಧುಕುಮಾರ ರವರ ಸಮಕ್ಷಮ ಬೆಳಗ್ಗೆ 11 ರಿಂದ 11.45 ಗಂಟೆಯವರೆಗೆ ನಿಪಿ.2 ರಂತೆ ಪಂಚನಾಮೆಯನ್ನು ಜರುಗಿಸಿದ್ದಾಗಿ, ಆಗ ಫ್ರಾಸಾ.1 ರವರು ಮು.ಮಾ.1 ಅಡಿಕೆ ದಬ್ಬೆಯನ್ನು ಹಾಜರುಪಡಿಸಿ ಅದನ್ನು ಆರೋಪಿಯಾದ ನೀನು ಕೃತ್ಯಕ್ಕೆ ಬಳಸಿದ್ದಾಗಿ ತಿಳಿಸಿದ ಮೇರೆಗೆ ಸದರಿ ದಬ್ಬೆಯನ್ನು ಮೇಲೆ ಹೇಳಿದ ಪಂಚರ ಸಮಕ್ಷಮ ಅಮಾನತುಪಡಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-18 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಸದರಿ ಪಂಚನಾಮೆಯ ಕಾಲಕ್ಕೆ ನಿಪಿ.3 ರಂತೆ ಫೋಟೋವನ್ನು ತೆಗೆಸಿದ್ದಾಗಿ, ನಂತರ ಠಾಣೆಯಲ್ಲಿ ಫ್ರಾಸಾ-1 ರವರ ಮುಂದುವರೆದ ಹೇಳಿಕೆಯನ್ನು ಮತ್ತು ಫ್ರಾಸಾ.4 ರಿಂದ ಫ್ರಾಸಾ.7 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-19 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ತನಿಖಾ ಕಾಲದಲ್ಲಿ ಅವರ ಆದೇಶದ ಮೇರೆಗೆ ಲಕ್ಕವಳ್ಳಿ ಪೊಲೀಸ್ ಠಾಣೆಯ ಮುಖ್ಯ ಪೇದೆ-74 ಪುರುಷೋತ್ತಮ ರವರು ಇಲಾಖಾವತಿಯಿಂದ ನೀಡಲಾಗಿದ್ದ ಕ್ಯಾಮೆರದಲ್ಲಿ ಫೋಟೋಗಳನ್ನು ತೆಗೆದು ವಿಡಿಯೋವನ್ನು ಚಿತ್ರಕರಿಸಿದಾಗಿ, ನಂತರ ಸದರಿ ಫೋಟೋ ಮತ್ತು ವಿಡಿಯೋವನ್ನು ಕಛೇರಿಯಲ್ಲಿದ್ದ ಕಂಪ್ಯೂಟರಿಗೆ ವರ್ಗಾಯಿಸಿ ಅವುಗಳನ್ನು ಪಿ.15 ಖಾಲಿ ಡಿ.ವಿ.ಡಿ. ಗೆ ವರ್ಗಾಯಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ 65(ಬಿ) ಅಡಿಯಲ್ಲಿ ನಿಪಿ.14 ರಂತೆ ದೃಢೀಕರಣ ಪತ್ರವನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-20 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿಃ 08-05-2020 ರಂದು ಲಕ್ಕವಳ್ಳಿ ಪೊಲೀಸ್ ಠಾಣೆಯ ಸಿಬ್ಬಂದಿಗಳು ಆರೋಪಿಯಾದ ನಿನ್ನನು ಬೆಳಗ್ಗೆ 11 ಗಂಟೆಗೆ ಅವರ ಮುಂದೆ ಹಾಜರು ಪಡಿಸಿದ್ದಾಗಿ, ನಿನ್ನನ್ನು ದಸ್ತಗಿರಿ ಕ್ರಮ ಅನುಸರಿಸಿ ಬಂಧಿಸಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-21 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿಃ 14-05-2020 ರಂದು ಫ್ರಾಸಾ.8 ಡಾಃ ಮಾನಸ ರವರಿಂದ ಫ್ರಾಸಾ.1 ರವರ ಗಾಯದ ಪ್ರಮಾಣಪತ್ರವನ್ನು ನಿಪಿ.10 ರಂತೆ ಪಡೆದುಕೊಂಡಿದ್ದಾಗಿ, ದಿಃ 16-05-2020 ರಂದು ಚಾಸಾ.8 ಕಿರಣ್ ರವರಿಂದ ಕೃತ್ಯ ನಡೆದ ದಿನ ಸದರಿ ಸ್ಥಳದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ನಿಪಿ.8 ರಂತೆ ವರದಿಯನ್ನು ಪಡೆದುಕೊಂಡಿದ್ದಾಗಿ, ದಿಃ 23-05-2020 ರಂದು ಘಟನಾ ಸ್ಥಳದ ನಕಾಶೆಯನ್ನು ಪಿ.17 ರಂತೆ ತರೀಕೆರೆ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರವರಿಂದ ಪಡೆದುಕೊಂಡಿದ್ದಾಗಿ, ದಿಃ 21-07-2020 ರಂದು ಫ್ರಾಸಾ.1, ಫ್ರಾಸಾ.4 ಮತ್ತು ಆರೋಪಿಯಾದ ನಿನ್ನ ಜಾತಿಯ ಬಗ್ಗೆ ವರದಿಯನ್ನು ನಿಪಿ.9 ರಂತೆ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-22 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ತನಿಖೆಯನ್ನು ಪೂರ್ಣಗೊಳಿಸಿ ತನಿಖೆಯಲ್ಲಿ ಆರೋಪಿಯಾದ ನಿನ್ನ ವಿರುದ್ಧ ಆರೋಪ ಸಾಬೀತಾದ ಕಾರಣ ನ್ಯಾಯಾಲಯಕ್ಕೆ ದಿನಾಂಕಃ18-07-2020 ರಂದು ದೋಷಾರೋಪಣ ಪತ್ರವನ್ನು ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-23 ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ ಇಲ್ಲ

ಪ್ರಶ್ನೆ-24 ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ?

ಉತ್ತರಃ ಇಲ್ಲ

(ಮೇಲಿನ ಪ್ರಶ್ನೆಗಳನ್ನು ಆರೋಪಿತರಿಗೆ ಕೇಳಿ ಅವರಿಗೆ ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ)

ದಿನಾಂಕಃ 17.06.2025. ಸಹಿ/-

(ಭಾನುಮತಿ ಬಿ.ಸಿ. ),
1 ನೇ ಅಪರ ಸತ್ರ ಮತ್ತು ವಿಶೇಷ ನ್ಯಾಯಾಧೀಶರು,
ಚಿಕ್ಕಮಗಳೂರು.